# Norms did not permit holding NEET in Kannada, say officials

## 'Karnataka never conducted CET in regional language'

**NEW DELHI/BENGALURU: Central government officials have said that Kannada could not be considered as one of the languages to write National Eligibility cum Entrance Test (NEET) in 2017-18 because of the norms followed to select the regional languages for the screening test for under-graduate medical course.**



As NEET was held at a short notice in 2016, only Hindi and English were considered then. It was decided that other languages would be included for subsequent exams. DH FILE PHOTO

Earlier this week, the health ministry announced that NEET for undergraduate courses in 2017-18 would be conducted in eight languages Gujarati, Marathi, Bengali, Assamese, Telegu, Tamil, Hindi and English.

Officials in New Delhi said the language choice was based on two criteria – the state had to conduct a medical entrance examination in the vernacular language at least for three years and there should be a lexicon of medical terms in that language. These norms were worked out in consultation with a number of experts and state officials to ensure availability of teachers, who can examine the copies in these languages.

"Karnataka never conducted the medical entrance examination in Kannada. The state officials who attended the health ministry meeting on November 25 through video conferencing did not raise any objections. They were satisfied with English as the preferred language for writing the NEET," sources told *DH*.

The controversy flared up with the surfacing of a letter from Jawaid Akhtar, principal secretary, Medical Education, Karnataka to the Union health secretary C K Mishra, requesting him to ensure that NEET is conducted in Kannada too.

Akhtar's letter dated December 14, 2016 was signed on December 20 and despatched on December 22. The health ministry sent its instruction to the Central Board of Secondary Education, which would conduct the NEET, on December 8, sources said.

Akhtar told *DH* in Bengaluru that when Mishra held a video conferencing seeking the state governments the necessity of conducting NEET in the regional languages, Karnataka had sought time to obtain approval of the state government before sending the request to the Centre.

Akhtar said, "CET in Karnataka has never been conducted in Kannada as none of the students are desirous of a Kannada question paper. The state government, however, felt that the students should nevertheless be given an option. We are keenly pursuing this issue. So far, we have not received any complaints from the students."

Sources in the Union government said the language decision was taken way back in 2013 before conducting the first NEET.

While the first nation-wide medical entrance test was a limited affair because of legal objections, the entrance examination could not be held in the next two years due to a verdict of the Supreme Court that ruled against the NEET.

After a favourable order from the apex court, the examination was re-started in 2016. As NEET was held at a short notice in 2016, only Hindi and English were considered then. It was decided that other languages would be included for subsequent exams.

**DH News Service**

# NEET: State govt.'s delay to blame for non-inclusion of Kannada?

TANU KULKARNI

**BENGALURU:** While the State government is crying foul over non-inclusion of Kannada among the regional languages in which students can write the National Eligibility-cum-Entrance Test (NEET), documents indicate that Karnataka delayed in making an appeal for its inclusion.

State sent appeal only on December 20, after the issue was raised by Kannada organisations

In fact, while the announcement on six regional languages, besides English and Hindi, in which NEET could be written was made on December 19, Karnataka sent its appeal only on December 20, after the issue was raised by Kannada organisations.

Sources in the Ministry of Health and Family Welfare (MHFW) also claimed that the Karnataka government had initially not sought bilingual exams. Sources said that MHFW had conducted an "exhaustive exercise" and had consulted various State governments.

## 'Orally conveyed'

However, Minister for Medical Education Sharanprakash Patil said the State had "orally conveyed" its wish for bilingual test earlier.

Speaking to presspersons in New Delhi, Union Minister Ananth Kumar said that the State government had "woken up to the issue too late". Sources in MHFW said they would consider including Kannada if the State government approaches them now.

'CENTRE MAY CONSIDER STATE'S DEMAND' | PAGE 9

THE NEW INDIAN EXPRESS



# SIDDU GOVT DIDN'T PUSH FOR NEET IN KANNADA, NOW BLAMES CENTRE

## Govt was silent when Centre sought its view on the issue; CET too has no Kannada option

RASHMI BELUR @Bengaluru

THE State Government, that is now blaming the Centre for not giving students an option to write National Eligibility-cum-Entrance Test (NEET) in Kannada, had itself remained silent over the issue when its suggestion was sought by the Centre. NEET is for admission to under graduate medical and dental courses.

On Friday, Chief Minister Siddaramaiah took strong exception to the Centre's decision of not allowing students to write NEET in Kannada. He also said they will shoot off a protest letter to Centre. Medical Education minister Sharan Prakash Patil had earlier stated that the Union Ministry for Health and Family Welfare (MHFW) was urged to include Kannada as one of the languages in NEET 2017, along with English. However, the authorities at the MHFW denied this, stating that the state government itself was to blame for Kannada not being included.

A senior ministry official told Express, "We communicated to all the state governments, seeking their opinion about inclusion of regional languages (bilingual paper) in NEET 2017. Some of the states did not reply and



Karnataka was one among them."

The same was reminded to all the secretaries of the state medical education/ health and family welfare department during the video conference held in first week of December 2016. The official from the state reportedly asked for more time to revert. "They did not get back to us. Their claim that they have communicated twice is false," said the official.

According to the Union health ministry officials, the state government had also submitted a proposal to conduct NEET in English earlier. An official from the Union ministry said that a Member of Parliament from Karnataka, who is also a Union minister, was well aware of this.

When contacted, Ananth Kumar, Union Minister for Chemical and Fertilisers, said, "So far the state government has not submitted any request seeking Kannada option in the NEET. Even in the proposal submitted on November 28, it preferred English. Now, the government has woken up to put pressure. However, we will try to speak to the ministry in this regard."

Even the letter sent to UMHFW, which was drafted on December 14 and signed on December 20, supported the UMHFW version. The letter released to media from state medical education principal secretary Jawaid Akhtar on Friday reads: "At that time we sought for time to obtain an approval of the state government before sending the request to government of India. The state government is requesting that the NEET may be conducted in Kannada language also along with English. It is felt that the students appearing in NEET-UG should have an option to refer to the question papers of the test in English as well as Kannada for marking their answers in OMR sheets."

The letter was dispatched on December 22, three days after the list of languages in which NEET would be conducted was announced.

### NO KANNADA ANYWHERE

- Centre sought state's views on inclusion of regional language in NEET, but Karnataka government failed to reply on time
- All these years, state government conducted CET only in English. No Kannada option was there
- The number of candidates cracking second PU science exams in Kannada is not known
- PUC question paper for science comes in Kannada also but text books are not available. Kannada is also not the language of teaching.

THE TIMES OF INDIA



# CM demands NEET in Kannada, says will write to Centre again

TIMES NEWS NETWORK

**Mysuru:** Chief minister Siddaramaiah has said that he would write a strongly-worded letter to the Centre for inclusion of Kannada as a medium of language for the National Eligibility cum Entrance Test (NEET). Saying that despite Kannada being awarded 'classical status' and him writing to the Union government earlier, it has not been included in the list of languages for the exam.

NEET was held across the country this year in eight languages including Tamil, Telugu and Assamese.

Releasing the University of Mysore centenary commemorative coins, coffee table book, centenary lecture book and Karnataka encyclopedia at Crawford Hall here on Friday, the CM said that Kannada language, which has over 2,000 years of history and also has 'classical status', was neglected by Centre while considering languages for NEET.



TUSSLE OVER LANGUAGE

"I had earlier written to the Centre to include Kannada as a medium of language for NEET but they neither bothered to reply nor include the language. So, this time I'm going to write a strongly-worded letter to them. We will not allow the Centre to neglect Kannada. Our students were deprived of writing the test in their language," the CM said.

"I have directed medical education minister Sharan Prakash Patil to visit New Delhi and discuss the issue with the ministers concerned to include Kannada as a medium of language for NEET. I have also told MPs from the state to have a discussion on the issue with the central government authorities," the CM said, claiming there was no politics over his pitch for inclusion of Kannada.

Siddaramaiah said he has asked University of Mysore VC K S Rangappa, who will retire on January 10, to work for the welfare of people after retirement. "I will not invite him to politics. It is his personal choice," he said.

Addressing the gathering, writer and professor emeritus Ham Pa Nagarajaiah said the government must cancel all the holidays except only that on August 15. People should be allowed to have 25 days of leave on in a year. The government should also restrict use of sound systems in religious centres as they create noise pollution, he added.

# ಕನ್ನಡದಲ್ಲಿ 'ನೀಟ್'ಗಾಗಿ ಕಾಂಗ್ರೆಸ್, ಬಿಜೆಪಿ ಜಟಾಪಟಿ

ಬೆಂಗಳೂರು: ಕನ್ನಡ ಮಾಧ್ಯಮದಲ್ಲಿ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ(ನೀಟ್) ನಡೆಸಬೇಕು ಎಂಬ ವಿಚಾರವಾಗಿ ಕಾಂಗ್ರೆಸ್ ಹಾಗೂ ಬಿಜೆಪಿ ಪರಸ್ಪರ ಕೆಸರೆರಚಾಟದಲ್ಲಿ ತೊಡಗಿವೆ.

ಕನ್ನಡದಲ್ಲಿ 'ನೀಟ್' ನಡೆಸಬೇಕು ಎಂದು ಕೋರಿ ಕೇಂದ್ರಕ್ಕೆ ಪತ್ರ ಬರೆದಿದ್ದರೂ ಇದಕ್ಕೆ ಸ್ಪಂದಿಸದೆ ಕನ್ನಡವನ್ನು ಕಡೆಗಣಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರಿದ್ದಾರೆ. ಇದಕ್ಕೆ ಪ್ರತಿಕ್ರಿಯೆ ನೀಡಿರುವ ಕೇಂದ್ರ ಸಚಿವ ಅನಂತ್‌ಕುಮಾರ್, ಇಂಗ್ಲಿಷ್‌ನಲ್ಲಿ ನೀಟ್ ನಡೆಸಲು ತನ್ನ ಅಭ್ಯಂತರ ಇಲ್ಲ ಎಂದು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಪತ್ರ ಬರೆದು ಸ್ಪಷ್ಟನೆ ನೀಡಿದ್ದರಿಂದ ಕನ್ನಡಕ್ಕೆ ಅವಕಾಶ ನೀಡಿಲ್ಲ ಎಂದು ತಿರುಗೇಟು ನೀಡಿದ್ದಾರೆ.

ಮೈಸೂರಿನಲ್ಲಿ ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮಿಳು, ತೆಲುಗು ಸೇರಿದಂತೆ 8 ಪ್ರಾದೇಶಿಕ ಭಾಷೆಗಳಲ್ಲಿ ನೀಟ್ ನಡೆಸಲು ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿ ಕನ್ನಡವನ್ನು ಕಡೆಗಣಿಸಿದೆ. ನೀಟ್ ಪ್ರಶ್ನೆ ಪತ್ರಿಕೆ ಕನ್ನಡದಲ್ಲೂ ಇದ್ದರೆ ಕರ್ನಾಟಕದ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಅನುಕೂಲವಾಗಲಿದೆ ಎಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದರೂ ಇದನ್ನು ಪರಿಗಣಿಸಿಲ್ಲ ಎಂದು ಕೇಂದ್ರವನ್ನು ತರಾಟೆಗೆ ತೆಗೆದುಕೊಂಡರು.

ಈ ಕುರಿತು ಮತ್ತೊಮ್ಮೆ ಕೇಂದ್ರ ಸರ್ಕಾರಕ್ಕೆ ಖಾರವಾದ ಪತ್ರ ಬರೆಯುವುದಲ್ಲದೆ, ವೈದ್ಯಕೀಯ ಶಿಕ್ಷಣ ಸಚಿವರಿಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರನ್ನು ಭೇಟಿಯಾಗಿ ಈ ಸಂಬಂಧ ಮನವಿ ಮಾಡಲು ಸೂಚಿಸಿರುವುದಾಗಿ ಹೇಳಿದರು.

ನೀಟ್ ಅನ್ನು ಕನ್ನಡದಲ್ಲಿ ಬರೆಯಲು ಅವಕಾಶ ನೀಡುವಂತೆ ರಾಜ್ಯದಿಂದ ಗೆದ್ದು ಹೋಗಿರುವ ಸಂಸದರು ಹಾಗೂ ಕೇಂದ್ರದ ಮಂತ್ರಿಗಳು ಪಕ್ಷಾತೀತವಾಗಿ ದನಿ ಎತ್ತಬೇಕು ಎಂದು ಆಗ್ರಹಿಸಿದರು.

**ರಾಜ್ಯ ಒಪ್ಪಿದ್ದಕ್ಕೆ ಇಂಗ್ಲಿಷ್‌ನಲ್ಲಿ ನೀಟ್:** ಕೇಂದ್ರ ಆರೋಗ್ಯ ಸಚಿವಾಲಯವು ಆಯಾ ರಾಜ್ಯಗಳಲ್ಲಿ ಯಾವ ಭಾಷಾ ಮಾಧ್ಯಮದಲ್ಲಿ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್) ಪರೀಕ್ಷೆ ನಡೆಯಬೇಕು ಎಂದು ಕೇಳಿದಾಗ ಕರ್ನಾಟಕವು ಇಂಗ್ಲಿಷ್‌ನಲ್ಲಿ ಪರೀಕ್ಷೆ ನಡೆಯಲಿ ಎಂದು ಹೇಳಿತ್ತು ಎಂದು ಕೇಂದ್ರ ಸಚಿವ ಅನಂತ್ ಕುಮಾರ್ ಪ್ರತಿಕ್ರಿಯಿಸಿದ್ದಾರೆ.

ದೆಹಲಿಯ ತಮ್ಮ ನಿವಾಸದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ನವೆಂಬರ್ 25ರಂದು ಕೇಂದ್ರ ಆರೋಗ್ಯ ಸಚಿವಾಲಯವು ವಿಡಿಯೋ ಕಾನ್ಫರೆನ್ಸ್ ಮೂಲಕ ಪರೀಕ್ಷೆಯ ಭಾಷಾ ಮಾಧ್ಯಮದ ಬಗ್ಗೆ ಎಲ್ಲ ರಾಜ್ಯಗಳ ಅಭಿಪ್ರಾಯ ಕೇಳಿತ್ತು. ಆಗ ಕರ್ನಾಟಕ ಸರ್ಕಾರದ ವೈದ್ಯಕೀಯ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟವರು, ಇಂಗ್ಲಿಷ್ ಮಾಧ್ಯಮದಲ್ಲಿ ಮಾಡಬೇಕು ಎಂದು ಹೇಳಿದ್ದರು. ಜೊತೆಗೆ ಬರವಣಿಗೆಯಲ್ಲಿಯೂ ಇದೇ ರೀತಿಯ ಪ್ರಸ್ತಾವನೆ ಸಲ್ಲಿಸಿದ್ದರು. ಆದರೆ, ಇದೀಗ ಮೂರು ದಿನಗಳ ಹಿಂದೆ ಎಚ್ಚೆತ್ತುಕೊಂಡು ಕನ್ನಡ ಮಾಧ್ಯಮದಲ್ಲಿ ಮಾಡಬೇಕು ಎಂದು ಬರೆದಿದ್ದಾರೆ ಎಂದು ಹೇಳಿದರು.

**ಸಮಾನಾರ್ಥಕ ಪದ ಹುಡುಕಿ:** ಕನ್ನಡದಲ್ಲಿ ನೀಟ್ ಬರೆಯಬೇಕಾದರೆ ಅದಕ್ಕೆ ಪೂರ್ವ ಸಿದ್ಧತೆಯ ಅಗತ್ಯವಿದೆ. ರಾಜ್ಯದಲ್ಲಿ ಸಿಇಟಿ ಕೂಡ ಇಂಗ್ಲಿಷ್‌ನಲ್ಲಿಯೇ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ನೀಟ್ ಪರೀಕ್ಷೆಗೆ ಬೇಕಾದ ಅನುವಾದ, ಇಂಗ್ಲಿಷ್‌ನಲ್ಲಿರುವ ತಾಂತ್ರಿಕ ಪದಗಳಿಗೆ ಕನ್ನಡದಲ್ಲಿ ಸಮಾನಾರ್ಥಕ ಪದಗಳ ತಿಳಿವಳಿಕೆಯನ್ನು ನೀಡುವುದು ಮುಂತಾದ ಕ್ರಮಗಳನ್ನು ಕೈಗೊಳ್ಳಬೇಕಿದೆ ಎಂದು ತಿಳಿಸಿದರು.

## ಪ್ರಧಾನಿಗೆ ಉಮಾಶ್ರೀ ಪತ್ರ

ಬೆಂಗಳೂರು: ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ರಾಷ್ಟ್ರೀಯ ಮಟ್ಟದ ಅರ್ಹತಾ ಪರೀಕ್ಷೆಯನ್ನು (ನೀಟ್) ಕನ್ನಡದಲ್ಲೂ ಬರೆಯಲು ಅವಕಾಶ ಕಲ್ಪಿಸುವಂತೆ ಕೇಂದ್ರದ ಸಂಬಂಧಪಟ್ಟ ಸಚಿವರಿಗೆ ಸೂಚನೆ ನೀಡಲು ಆಗ್ರಹಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಉಮಾಶ್ರೀ ಅವರು ಪ್ರಧಾನಿ ನರೇಂದ್ರ ಮೋದಿಯವರಿಗೆ ಪತ್ರ ಬರೆದಿದ್ದಾರೆ. ಅದೇ ರೀತಿ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಪ್ರಕಾಶ್ ಜಾವಡೇಕರ್ ಹಾಗೂ ಆರೋಗ್ಯ ಸಚಿವ ಜಗತ್ ಪ್ರಕಾಶ್ ನಡ್ಡಾ ಅವರಿಗೂ ಪ್ರತ್ಯೇಕವಾಗಿ ಪತ್ರ ಬರೆದಿರುವ ಸಚಿವೆ ಉಮಾಶ್ರೀ, ಕನ್ನಡದಲ್ಲಿ ನೀಟ್ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದ್ದಾರೆ.

ಕನ್ನಡಪ್ರಭ

# ನೀಟ್: ಸರ್ಕಾರಕ್ಕಿಲ್ಲ ಮುತುವರ್ಜಿ

## ಇಂಗ್ಲಿಷ್‌ನಲ್ಲೇ ರಾಷ್ಟ್ರೀಯ ಅರ್ಹತಾ ಪರೀಕ್ಷೆ ನಡೆಸಲು ಒಪ್ಪಿಗೆ ಸೂಚಿಸಿರುವ ಅಂಶ ತಡವಾಗಿ ಬಹಿರಂಗ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯನ್ನು ಪ್ರಾದೇಶಿಕ ಭಾಷೆಯಲ್ಲಿ ಬರೆಯುವ ಅವಕಾಶ ಕಲ್ಪಿಸಬೇಕೆಂದು ವಿವಿಧ ರಾಜ್ಯಗಳು ಮನವಿ ಮಾಡುತ್ತಿದ್ದರೆ, ರಾಜ್ಯ ಸರ್ಕಾರ ಮಾತ್ರ ಇಂಗ್ಲಿಷ್‌ನಲ್ಲಿಯೇ ಪರೀಕ್ಷೆ ನಡೆಸುವಂತೆ ಪತ್ರ ಬರೆದಿತ್ತು ಎನ್ನುವುದು ತಡವಾಗಿ ಗೊತ್ತಾಗಿದೆ.

ಕಳೆದ ನ.25ರಂದು ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳು, ಇಂಗ್ಲಿಷ್‌ನಲ್ಲಿಯೇ ಪರೀಕ್ಷೆ ನಡೆಸುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದರು. ಈ ಸಂಗತಿ ಬೆಳಕಿಗೆ ಬಂದ ನಂತರ ಎಚ್ಚೆತ್ತುಕೊಂಡಿರುವ ಇಲಾಖೆ, ಮತ್ತೊಂದು ಸುತ್ತಿನ ಪತ್ರ ಬರೆದು ಕನ್ನಡದಲ್ಲಿಯೇ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸುವಂತೆ ಮನವಿ ಮಾಡಿದೆ.

ಆರೋಗ್ಯ ಸಚಿವಾಲಯದ ಮಾಹಿತಿಗಳ ಪ್ರಕಾರ ಅಸ್ಸಾಮಿ, ಗುಜರಾತಿ, ತೆಲುಗು, ಬಂಗಾಳಿ, ತಮಿಳು ಹಾಗೂ ಮರಾಠಿ ಭಾಷೆಗಳಲ್ಲಿ ಪರೀಕ್ಷೆ ನಡೆಸುವಂತೆ ಕೋರಿಕೆ ಪತ್ರಗಳು ಬಂದಿವೆ. ಕನ್ನಡಿಗರು ಮಾತ್ರ ಹಿಂದಿ ಅಥವಾ ಇಂಗ್ಲಿಷ್ ಭಾಷೆಯಲ್ಲೇ ನೀಟ್ ಪರೀಕ್ಷೆ ಬರೆಯಬೇಕಾಗಿದೆ. ಈ ಸ್ಥಿತಿಗೆ ಕರ್ನಾಟಕ ಸರ್ಕಾರವೇ ಹೊಣೆ ಹೊರುವಂತಾಗಿದೆ ಎನ್ನಲಾಗಿದೆ.

ಬೇರೆ ರಾಜ್ಯಗಳು ತಮ್ಮ ಮಾತೃಭಾಷೆಗಾಗಿ ಹೋರಾಟ ಮಾಡುತ್ತಿರುವ ಸಂದರ್ಭದಲ್ಲಿ, ಕನ್ನಡವನ್ನು ಉಳಿಸಬೇಕಾದ ರಾಜ್ಯ ಸರ್ಕಾರವೇ ಅಸಡ್ಡೆ ತೋರಿರುವುದು ವಿಪರ್ಯಾಸ.

ರಾಜ್ಯ ಸರ್ಕಾರದ ಕನ್ನಡ ವಿರೋಧಿ ನಡೆ ನೀಟ್ ಆಕಾಂಕ್ಷಿಗಳನ್ನು ಕೆರಳಿಸಿದೆ. ಇಂಗ್ಲಿಷ್‌ನಲ್ಲಿಯೇ ಪರೀಕ್ಷೆ ನಡೆಸಿದರೆ, ಗ್ರಾಮೀಣ ವಿದ್ಯಾರ್ಥಿಗಳಿಗೆ ಮಾರಕವಾಗಿ ಪರಿಣಮಿಸಲಿದೆ.

ಇದೀಗ ಡಿ. 20ರಂದು ಮತ್ತೊಮ್ಮೆ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯದರ್ಶಿಗೆ ಪತ್ರ ಬರೆಯದಿರುವ ವೈದ್ಯಕೀಯ ಶಿಕ್ಷಣ ಇಲಾಖೆಗೆ ಯಾವ ರೀತಿಯ ಉತ್ತರ ಸಿಗಲಿದೆ ಕಾಯ್ದು ನೋಡಬೇಕಿದೆ. ಈ ಕುರಿತು ಸಚಿವರ ಪ್ರತಿಕ್ರಿಯೆಗೆ ಪ್ರಯತ್ನಿಸಿದಾದರೂ ಕರೆ ಸ್ವೀಕರಿಸಲಿಲ್ಲ.

### ಕೇಂದ್ರಕ್ಕೆ ರಾಜ್ಯದಿಂದ ಪ್ರತಿಭಟನಾ ಪತ್ರ

ಮೈಸೂರು: ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆಯುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯನ್ನು (ಎನ್‌ಇಇಟಿ) ಕನ್ನಡದಲ್ಲಿ ಬರೆಯುವ ಅವಕಾಶ ನೀಡದಿರುವುದನ್ನು ಖಂಡಿಸಿ ಕೇಂದ್ರಕ್ಕೆ ಪ್ರತಿಭಟನಾ ಪತ್ರ ಬರೆಯಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದಿ, ಇಂಗ್ಲಿಷ್, ಅಸ್ಸಾಮಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು ಭಾಷೆಗಳಿಗೆ ಅವಕಾಶ ನೀಡಿ, ಶಾಸ್ತ್ರೀಯ ಭಾಷೆಯಾದ ಕನ್ನಡಕ್ಕೆ ಅವಕಾಶ ನೀಡದಿರುವುದು ಸರಿಯಲ್ಲ ಎಂದು ಮುಖ್ಯ ಕಾರ್ಯದರ್ಶಿ ಮೂಲಕ ಪತ್ರ ಬರೆಸಲಾಗಿದೆ ಎಂದರು. ಈ ಸಂಬಂಧ ವೈದ್ಯಕೀಯ ಶಿಕ್ಷಣ ಇಲಾಖೆ ಕೇಂದ್ರಕ್ಕೆ ಪ್ರಸ್ತಾವನೆಯನ್ನೇ ಸಲ್ಲಿಸಿರಲಿಲ್ಲ ಎಂಬುದು ಸರಿಯಲ್ಲ. ನಾವು ಪ್ರಸ್ತಾವ ಸಲ್ಲಿಸಿದ್ದರೂ ಪರಿಗಣಿಸಿಲ್ಲ. ಈ ಬಗ್ಗೆ ಟೀಕೆ ಮಾಡುವ ಬಿಜೆಪಿಯ 17 ಮಂದಿ ಸಂಸದರು ಏನು ಮಾಡುತ್ತಿದ್ದರು? ಅವರಿಗೆ ಜವಾಬ್ದಾರಿ ಇಲ್ಲವೇ? ಎಂದು ಅವರು ಪ್ರಶ್ನಿಸಿದ ಸಿಎಂ ಮತ್ತೊಮ್ಮೆ ಪ್ರಸ್ತಾವ ಸಲ್ಲಿಸುವಂತೆ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಅವರಿಗೆ ಸೂಚಿಸಿದ್ದೇನೆ ಎಂದು ಹೇಳಿದರು.

> **ಕೊಡಗು ಜಿಲ್ಲೆಯ ದಿಡ್ಡಳ್ಳಿಗೆ ಭೇಟಿ ನೀಡಿ, ಗಿರಿಜನರ ಸಮಸ್ಯೆಯನ್ನು ಬಗೆಹರಿಸುವಂತೆ ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್. ಆಂಜನೇಯ ಅವರಿಗೆ ಸೂಚಿಸಿದ್ದೇನೆ. ಅವರು ಕ್ರಮಕೈಗೊಳ್ಳುತ್ತಾರೆ.**
>
> • **ಸಿದ್ದರಾಮಯ್ಯ** ಮುಖ್ಯಮಂತ್ರಿ

ಪ್ರಜಾವಾಣಿ



## ಪ್ರಾದೇಶಿಕ ಭಾಷೆಗಳಲ್ಲಿ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ

# ಕನ್ನಡಕ್ಕೆ ನಿಯಮವೇ ಅಡ್ಡಿ


ಪ್ರಜಾವಾಣಿ ವಾರ್ತೆ

ನವದೆಹಲಿ: ನಿಯಮಗಳು ಅಡ್ಡಿಯಾದ ಕಾರಣ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ನಡೆಸುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯನ್ನು (ಎನ್‌ಇಇಟಿ) ಕನ್ನಡದ ಬದಲು ಇಂಗ್ಲಿಷ್‌ನಲ್ಲೇ ಆಯೋಜಿಸಲು ಕರ್ನಾಟಕ ಸರ್ಕಾರವೇ ಸಮ್ಮತಿ ಸೂಚಿಸಿದ್ದ ವಿಷಯ ಈಗ ಬಹಿರಂಗಗೊಂಡಿದೆ.

ಅರ್ಹತಾ ಪರೀಕ್ಷೆಯನ್ನು ಕನ್ನಡದಲ್ಲಿ ನಡೆಸುವುದಕ್ಕೆ ನಿಯಮಗಳು ಅಡ್ಡಿಯಾಗಿದ್ದು ಹಾಗೂ ಸೌಲಭ್ಯಗಳ ಕೊರತೆಯ ಕಾರಣ ಸದ್ಯದ ಮಟ್ಟಿಗೆ ಕನ್ನಡದಲ್ಲಿ ಪರೀಕ್ಷೆ ನಡೆಸುವುದು ಅಸಾಧ್ಯ ಎಂಬ ಅಭಿಪ್ರಾಯದೊಂದಿಗೆ ಇಂಗ್ಲಿಷ್‌ನಲ್ಲೇ ಪರೀಕ್ಷೆ ನಡೆಸುವುದಕ್ಕೆ ವೈದ್ಯಕೀಯ ಶಿಕ್ಷಣ ಇಲಾಖೆ ಅಧಿಕಾರಿಗಳು ಕಳೆದ ಮೇ ತಿಂಗಳಲ್ಲೇ ಒಪ್ಪಿಗೆ ಸೂಚಿಸಿದ್ದರು ಎಂಬುದನ್ನು ಕೇಂದ್ರದ ಆರೋಗ್ಯ ಸಚಿವಾಲಯದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಕೇಂದ್ರ ಸರ್ಕಾರವು ಕೆಲವು ವರ್ಷಗಳ ಹಿಂದೆಯೇ ವೇದಿಕೆ ಸಿದ್ಧಪಡಿಸಿ, 2013ರಲ್ಲಿ ಮೊದಲ ಬಾರಿಗೆ ಎನ್‌ಇಇಟಿ ಆಯೋಜಿಸಿತ್ತು. ಆದರೆ, ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ನಂತರದ ಎರಡು ವರ್ಷ ಪರೀಕ್ಷೆ ಆಯೋಜಿಸುವುದನ್ನು ಕೈಬಿಟ್ಟಿದ್ದ ಕೇಂದ್ರ, ಕೋರ್ಟ್ ಹಸಿರು ನಿಶಾನೆ ನೀಡಿದ್ದರಿಂದ 2016ರಿಂದ ಮತ್ತೆ ಪರೀಕ್ಷೆ ಆಯೋಜಿಸುತ್ತಿದೆ.

ಸತತ ಮೂರು ವರ್ಷಗಳ ಕಾಲ ಆಯಾ ರಾಜ್ಯಗಳು ಆಯಾ ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ನಡೆಸಿದ್ದರೆ ಮಾತ್ರ ಆಯಾ ಭಾಷಾ ಮಾಧ್ಯಮದಲ್ಲೇ



ಎನ್‌ಇಇಟಿ ಆಯೋಜಿಸಲು ಅನುಮತಿ ನೀಡುವ ನಿಯಮವನ್ನೂ ಈ ಸಂದರ್ಭ ರೂಪಿಸಲಾಗಿತ್ತು.

ಇದೀಗ ಇಂಗ್ಲಿಷ್ ಮತ್ತು ಹಿಂದಿಯ ಜೊತೆಗೆ ಸಂಬಂಧಿಸಿದ ಇತರ ರಾಜ್ಯಗಳು ಆಯಾ ಭಾಷೆಯಲ್ಲಿ ಕಳೆದ 3 ವರ್ಷಗಳಿಂದ ಪರೀಕ್ಷೆ ಆಯೋಜಿಸುತ್ತಿರುವುದರಿಂದ ಅಸ್ಸಾಮಿ, ಬೆಂಗಾಲಿ, ಮರಾಠಿ, ಗುಜರಾತಿ, ತೆಲುಗು ಮತ್ತು ತಮಿಳು ಭಾಷೆಯಲ್ಲಿ ಎನ್‌ಇಇಟಿ ಆಯೋಜಿಸಲು ಅವಕಾಶ ನೀಡಿ ಡಿ. 21ರಂದು ಆದೇಶ ಹೊರಡಿಸಲಾಗಿದೆ.

ಮುಖ್ಯವಾಗಿ ಈ ನಿಯಮ ಪಾಲಿಸದೇ ಇರುವುದರಿಂದ ಕೇಂದ್ರದ ಆರೋಗ್ಯ ಸಚಿವಾಲಯ ಮತ್ತು ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿಗಳು (ಸಿಬಿಎಸ್‌ಇ) ಕನ್ನಡವನ್ನು ಕೈಬಿಡುವ ನಿರ್ಧಾರ ಪ್ರಕಟಿಸಿದಾಗ, ಕರ್ನಾಟಕದ ಅಧಿಕಾರಿಗಳು ಅದಕ್ಕೆ ವಿರೋಧ ವ್ಯಕ್ತಪಡಿಸಲಿಲ್ಲ ಎಂಬುದು ಕೇಂದ್ರದ ಸ್ಪಷ್ಟನೆ.

ವೈದ್ಯಕೀಯ ಮತ್ತು ದಂತ ವೈದ್ಯಕೀಯ ಪ್ರವೇಶದ ಅರ್ಹತಾ ಪರೀಕ್ಷೆಯನ್ನು ಆಯೋಜಿಸಲು ಸಿದ್ಧತೆಯ ಅಗತ್ಯವೂ ಇದೆ. ಕನ್ನಡದಲ್ಲಿ ವೈದ್ಯಕೀಯ ಪದ ಭಂಡಾರ ಹೊಂದಿರಬೇಕಲ್ಲದೆ, ಉತ್ತರ ಪತ್ರಿಕೆಗಳ ಮೌಲ್ಯಮಾಪಕರನ್ನೂ ಅಣಿಗೊಳಿಸಬೇಕು. ಆದರೆ, ಕಳೆದ ಮೂರು ವರ್ಷಗಳಿಂದ ಕರ್ನಾಟಕ ಸರ್ಕಾರ ಈ ನಿಟ್ಟಿನಲ್ಲಿ ಸಿದ್ಧತೆ ಕೈಗೊಂಡಿರಲಿಲ್ಲ ಎನ್ನಲಾಗುತ್ತಿದೆ.

ಕರ್ನಾಟಕದ ವೈದ್ಯಕೀಯ ಶಿಕ್ಷಣ ಇಲಾಖೆಯು ಕನ್ನಡ ಮಾಧ್ಯಮದಲ್ಲೂ ಪರೀಕ್ಷೆಗೆ ಅವಕಾಶ ಕೋರಿ ಡಿ. 14ರಂದು ಪ್ರಸ್ತಾವನೆ ಸಿದ್ಧಪಡಿಸಿದ್ದು, ಪ್ರಧಾನ ಕಾರ್ಯದರ್ಶಿಯವರು ಆ ಪತ್ರಕ್ಕೆ ಡಿ. 20ರಂದು ಸಹಿ ಮಾಡಿದ್ದಾರೆ.

5 ನೇ ಪುಟ ನೋಡಿ

## ವಿಕಾಸಸೌಧದಿಂದ ಹೊರಬಾರದ ರಾಜ್ಯದ ಪತ್ರ

ಬೆಂಗಳೂರು: ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ನಡೆಸುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯನ್ನು (ಎನ್‌ಇಇಟಿ) ಕನ್ನಡದಲ್ಲಿ ನಡೆಸಬೇಕು ಎಂದು ಕೇಳಿ ರಾಜ್ಯ ಸರ್ಕಾರ ಕೇಂದ್ರಕ್ಕೆ ಬರೆದಿರುವ ಪತ್ರ ಇನ್ನೂ ವಿಕಾಸಸೌಧದಿಂದ ಹೊರಗೇ ಬಂದಿಲ್ಲ!

ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಜಾವೆದ್ ಅಖ್ತರ್ ಅವರು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾರ್ಯದರ್ಶಿ ಸಿ.ಕೆ. ಮಿಶ್ರ ಅವರಿಗೆ ಡಿ. 14ರಂದು ಪತ್ರ ಬರೆದಿದ್ದಾರೆ. ಅದಕ್ಕೆ ಅವರು ಸಹಿ ಹಾಕಿದ್ದು ಡಿ.20 ರಂದು ಸಹಿ ಹಾಕಿದ್ದಾರೆ.

ಅನಂತರ ಪತ್ರವನ್ನು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಕಚೇರಿಗೆ ಕಳುಹಿಸಲಾಗಿದೆ. ಡಿ. 22ರಂದು ಈ ಪತ್ರ ಸ್ವೀಕೃತಿ ಕೊಡಲಾಗಿದೆ. ಇನ್ನೂ ಅಖ್ತರ್ ಅವರ ಪತ್ರ ಇದೇ ಇಲಾಖೆಯಲ್ಲಿದೆ.

5 ನೇ ಪುಟ ನೋಡಿ

ವಿಜಯವಾಣಿ



# ರಾಜ್ಯ ನೀಟ್ ಆಗಿ ಹೇಳಿದ್ದನ್ನೇ ಕೇಂದ್ರ ಸರ್ಕಾರ ಮಾಡಿದ್ದು

## ಇಂಗ್ಲಿಷ್ ಓಕೆ ಎಂದು ಎಡವಟ್ಟು ಮಾಡಿದ್ದ ಸರ್ಕಾರ ಎಚ್ಚೆತ್ತುಕೊಳ್ಳುವುದರೊಳಗೆ ಹೊರಬಿತ್ತು ನಿರ್ಧಾರ

■ **ಕೆ.ರಾಘವ ಶರ್ಮ** ನವದೆಹಲಿ

ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಲಾಗುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯಲ್ಲಿ (ನೀಟ್) ಪ್ರಾದೇಶಿಕ ಭಾಷೆಗಳ ಪಟ್ಟಿಗೆ ಕನ್ನಡವನ್ನು ಪರಿಗಣಿಸದೇ ಇರುವ ನಿರ್ಧಾರವನ್ನು ರಾಜ್ಯ ಸರ್ಕಾರದ ಅಭಿಪ್ರಾಯ ಪಡೆದ ನಂತರವೇ ಕೈಗೊಳ್ಳಲಾಗಿತ್ತು ಎಂಬ ಅಂಶ ಬೆಳಕಿಗೆ ಬಂದಿದೆ. ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆ ಮತ್ತು ಮಾನವ ಸಂಪನ್ಮೂಲ ಇಲಾಖೆಗಳ ಜೊತೆಗಿನ ಲಿಖಿತ ಸಂವಹನ ಹಾಗೂ ತತ್ಸಂಬಂಧ ನಡೆದ ಅಧಿಕಾರಿಗಳ ಟೆಲಿಕಾನ್ಫರೆನ್ಸ್‌ನಲ್ಲಿ ರಾಜ್ಯ ಸರ್ಕಾರ ಇಂಗ್ಲಿಷ್ ಭಾಷೆಯಲ್ಲೇ ಪರೀಕ್ಷೆ ಓಕೆ ಎಂದು ಅಭಿಪ್ರಾಯ ಪಟ್ಟಿತ್ತು. ರಾಜ್ಯ ಸರ್ಕಾರ ಕನ್ನಡಪರ ಸಂಘಟನೆಗಳ ಆಕ್ರೋಶದಿಂದ ಎಚ್ಚೆತ್ತು ಕನ್ನಡ ಪರಿಗಣಿಸುವಂತೆ ಮರು ಮನವಿ ಮಾಡುವ ಹೊತ್ತಿಗೆ ತಡವಾಗಿತ್ತು ಎಂದು ಕೇಂದ್ರದ ಅಧಿಕಾರಿಗಳು ಬಹಿರಂಗಪಡಿಸಿದ್ದಾರೆ.




ನೀಟ್ ಪರೀಕ್ಷೆಯನ್ನು ಪ್ರಾದೇಶಿಕ ಭಾಷೆಗಳಲ್ಲಿ ನಡೆಸುವ ಬಗ್ಗೆ ಕೇಂದ್ರ ಆರೋಗ್ಯ ಇಲಾಖೆ ಮತ್ತು ಮಾನವ ಸಂಪನ್ಮೂಲ ಇಲಾಖೆಗಳು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಉನ್ನತ ಶಿಕ್ಷಣ ಇಲಾಖೆಗಳಿಂದ ಅಭಿಪ್ರಾಯ ಕೋರಿದ್ದವು. ಇದಕ್ಕೆ ಪ್ರತಿಕ್ರಿಯಿಸಿದ್ದ ಅಧಿಕಾರಿಗಳು ರಾಜ್ಯ ಇಂಗ್ಲಿಷ್ ಭಾಷೆಯನ್ನೇ ಆಯ್ಕೆ ಮಾಡಿಕೊಂಡಿರುವುದಾಗಿ ಮಾಹಿತಿ ಹಂಚಿಕೊಂಡಿದ್ದರು. ಇದನ್ನು ಆಧರಿಸಿಯೇ ನ.26ರಂದು ವಿವಿಧ ರಾಜ್ಯಗಳ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲು ಕೇಂದ್ರ ಆರೋಗ್ಯ ಇಲಾಖೆ ವಿಡಿಯೋ ಕಾನ್ಫರೆನ್ಸ್ ಏರ್ಪಡಿಸಿತ್ತು. ಈ ಸಂದರ್ಭದಲ್ಲೂ ರಾಜ್ಯದ ಅಧಿಕಾರಿಗಳು ಇಂಗ್ಲಿಷ್ ಆಯ್ದುಕೊಳ್ಳುವುದಾಗಿ ಪ್ರಸ್ತಾಪಿಸಿದ್ದರು.

▶ ಪುಟ 7

ಮುಂದಿನ ವರ್ಷ ಕನ್ನಡದಲ್ಲೇ ಸಿಇಟಿ ▶ 7



ಕನ್ನಡದಲ್ಲಿ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ ಬರೆಯಲು ಅವಕಾಶ ನೀಡದಿರುವುದನ್ನು ಖಂಡಿಸಿ ಕೇಂದ್ರ, ಪ್ರಧಾನಿಗೆ ಪ್ರತಿಭಟನಾತ್ಮಕ ಪತ್ರ ಬರೆಯಲಾಗುವುದು. ಕನ್ನಡದಲ್ಲೂ ನೀಟ್ ಪರೀಕ್ಷೆಗೆ ಬರೆಯಲು ಅವಕಾಶ ನೀಡುವಂತೆ ಕೇಂದ್ರದ ಮೇಲೆ ಒತ್ತಡ ಹೇರಲು ರಾಜ್ಯದ ಸಂಸದರಿಗೆ ಮನವಿ ಮಾಡಲಾಗುವುದು

। **ಸಿದ್ದರಾಮಯ್ಯ** ಮುಖ್ಯಮಂತ್ರಿ

### ಚರ್ಚಿಸಿಯೇ ತೀರ್ಮಾನ

ರಾಷ್ಟ್ರೀಯ ಅರ್ಹತಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪ್ರತಿ ವಿಷಯ ಬಗ್ಗೆಯೂ ರಾಜ್ಯ ಸರ್ಕಾರಗಳೊಂದಿಗೆ ವಿಚಾರ-ವಿನಿಮಯ ನಡೆಸಿಯೇ ತೀರ್ಮಾನ ತೆಗೆದುಕೊಳ್ಳಲಾಗಿದೆ. ಭಾಷೆಗಳ ಆಯ್ಕೆಗಳ ವಿಚಾರದಲ್ಲೂ ಇದನ್ನೇ ಅನುಸರಿಸಿದ್ದೇವೆ ಎಂದು ಕೇಂದ್ರ ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಜಯವಾಣಿ



ವಿಜಯವಾಣಿ ಚಿತ್ರ



ಕೋಲಾರ ಹೊರವಲಯದ ಶ್ರೀದೇವರಾಜ ಅರಸು ನರ್ಸಿಂಗ್ ಕಾಲೇಜಿನಲ್ಲಿ ಆಯೋಜಿಸಿದ್ದ ವಾರ್ಷಿಕ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ದೇವರಾಜ ಅರಸು ಉನ್ನತ ಶಿಕ್ಷಣ ಸಂಸ್ಥೆ ಉಪಕುಲಪತಿ ಡಾ.ಸಿ.ವಿ.ರಘುವೀರ್, ಕಾರ್ಯನಿರ್ವಾಹಕ ಇಂಜಿನಿಯರ್ ಕೋದಂಡರಾಮ ಬಹುಮಾನ ವಿತರಣೆ ಮಾಡಿದರು.